# DCET-2019

## ಕರ್ನಾಟಕ ಪರೀಕ್ಷಾ ಪ್ರಾಧಿಕಾರ

### ಅಭ್ಯರ್ಥಿಗಳಿಗೆ ಸೂಚನೆಗಳು – ಎರಡನೇ ಸುತ್ತಿನ ಸೀಟು ಹಂಚಿಕೆ

| Option Entry Schedule – Second and Final Round | |
|---|---|
| **Particulars** | **Date and Time** |
| ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 06-09-2019 after 2.00 pm |
| ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಅಳಿಸಿ / ಬದಲಾಯಿಸಿ / ಮಾರ್ಪಡಿಸಿ) | From 4.00 pm on 06-09-2019 to 09-09-2019 up to 11.00 am |
| ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 09-09-2019 after 6.00 pm |
| ಶುಲ್ಕ ಪಾವತಿ ಮಾಡುವುದು – ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳುವುದು | 11-09-2019 to 12-09-2019 |
| ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 13-09-2019 before 5.30 pm |

ಇಷ್ಟವಿದ್ದಲ್ಲಿ ಅಭ್ಯರ್ಥಿಗಳು ಹೊಸದಾಗಿ ಆದ್ಯತೆಗಳನ್ನು ದಾಖಲಿಸಬಹುದಾಗಿರುತ್ತದೆ.

ಪ್ರಾಧಿಕಾರದ ವೆಬ್‌ಸೈಟ್‌ನ ನಿಗದಿತ ಲಿಂಕ್ ಆಯ್ಕೆ ಮಾಡಿಕೊಂಡು ಅಭ್ಯರ್ಥಿಗಳು ಅವರುಗಳ ಮಾಹಿತಿಯನ್ನು ದಾಖಲಿಸಿದಲ್ಲಿ ಮೊದಲ ಸುತ್ತಿನಲ್ಲಿ ದಾಖಲಿಸಿದ ಆದ್ಯತೆಗಳನ್ನು ತೋರಿಸಲಾಗುವುದು. ಮೊದಲ ಸುತ್ತಿನಲ್ಲಿ ದಾಖಲಿಸಿದ ಆದ್ಯತೆಗಳು ಎರಡನೇ ಸುತ್ತಿಗೂ ಸಹ ಅನ್ವಯಿಸುತ್ತದೆ. (ಅಂದರೆ ಮೇಲ್ಪಟ್ಟ ಆದ್ಯತೆಗಳು ಮಾತ್ರ) ಮೊದಲ ಸುತ್ತಿಗೂ ಮುಂಚೆ ದಾಖಲಿಸಿದ ಆದ್ಯತೆಗಳನ್ನು ಅಂತಿಮ ಎಂದು ಪರಿಗಣಿಸಲಾಗುವುದು.

ಅಭ್ಯರ್ಥಿಗಳು ಮೇಲ್ಪಟ್ಟ ಆದ್ಯತೆಗಳನ್ನು (Higher order Options above the allotted option) ಬದಲಾಯಿಸಬಹುದು ಅಥವಾ ತೆಗೆದುಹಾಕಬಹುದು.

ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಚಿಸಿರುತ್ತಾರೆ ಎಂದರೆ ಮೊದಲಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ. ಈ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು (Higher order Options above the allotted option) ದೊರಕದಿದ್ದಲ್ಲಿ ಮೊದಲ ಸುತ್ತಿನಲ್ಲಿ ಯಾವುದಾದರೂ ಸೀಟು ಹಂಚಿಕೆಯಾಗಿದ್ದಲ್ಲಿ ಅದೇ ಸೀಟು ಉಳಿಯುತ್ತದೆ.

**ಗಮನಿಸಿ:** ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ ಅಥವಾ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು confirm ಆದಲ್ಲಿ ಯಾವುದೇ ಕಾರಣಕ್ಕೂ ಬದಲಾಯಿಸುವುದಕ್ಕೆ ಅಥವಾ ರದ್ದುಪಡಿಸಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಮೊದಲು ಪೋಷಕರೊಡನೆ ಚರ್ಚಿಸಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಸೂಚಿಸಿದೆ. ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಗಳನ್ನು ಮತ್ತು ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯನ್ನು ಮಾಡುವುದರಿಂದ ಅಭ್ಯರ್ಥಿಯು ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯಲು ಸೂಚಿಸಿದೆ.

1. ಅಭ್ಯರ್ಥಿಗಳು ದಾಖಲಿಸಿರುವ ಆದ್ಯತೆಗಳು ಈ ಸುತ್ತಿಗೂ ಸಹ ಅನ್ವಯಿಸುತ್ತದೆ. ಇಷ್ಟವಿದ್ದಲ್ಲಿ ಅಭ್ಯರ್ಥಿಗಳು ಹೊಸದಾಗಿ ಆದ್ಯತೆಗಳನ್ನು ದಾಖಲಿಸಬಹುದಾಗಿರುತ್ತದೆ.
2. ಮೇಲ್ಪಟ್ಟ ಆದ್ಯತೆಗಳು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು.

   ಉದಾ: ಒಬ್ಬ ಅಭ್ಯರ್ಥಿಗೆ ಮೊದಲ ಸುತ್ತಿನಲ್ಲಿ 115ನೇ ಕ್ರಮಾಂಕದ ಆದ್ಯತೆಗೆ ಸೀಟು ಲಭ್ಯವಾಗಿದೆ ಎಂದು ಭಾವಿಸಿದಲ್ಲಿ, ಒಂದರಿಂದ 114ನೆಯ ವರೆಗಿನ ಆದ್ಯತೆಗಳನ್ನು ಪರಿಗಣಿಸಲಾಗುತ್ತದೆ.

3. ಕೆಳಗಿನ ಎಲ್ಲಾ ಆದ್ಯತೆಗಳನ್ನು ಅಂದರೆ 116 ರಿಂದ ಕೊನೆಯವರೆಗಿನ ಆದ್ಯತೆಗಳನ್ನು ಪರಿಗಣಿಸಲಾಗುವುದಿಲ್ಲ.
4. ಅಭ್ಯರ್ಥಿಗಳು ಒಂದರಿಂದ 114ರ ವರೆಗಿನ ಆದ್ಯತೆಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ತೆಗೆದುಹಾಕಬಹುದು.
5. ಮೆರಿಟ್ ಆಧಾರದ ಮೇಲೆ ಒಂದರಿಂದ 114ನೆ ವರೆಗಿನ ಯಾವುದಾದರೂ ಆದ್ಯತೆಗೆ ಸೀಟು ಹಂಚಿಕೆಯಾದಲ್ಲಿ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ತಾನಾಗಿಯೇ ರದ್ದುಗೊಳ್ಳುತ್ತದೆ ಮತ್ತು ರದ್ದುಗೊಂಡ ಸೀಟುಗಳನ್ನು ನಂತರದ ಮೆರಿಟ್‌ನ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು.
6. ಮೆರಿಟ್ ಆಧಾರದ ಮೇಲೆ ಒಂದರಿಂದ 114ನೆ ವರೆಗಿನ ಯಾವುದಾದರೂ ಆದ್ಯತೆಗೆ ಸೀಟು ಸಿಗದಿದ್ದಲ್ಲಿ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಖಾತರಿಯಾಗುತ್ತದೆ / ಉಳಿಯುತ್ತದೆ.
7. ಪ್ರತಿ ಬಾರಿಯೂ ಗಣಕಯಂತ್ರವು ಮೇಲಿನ ಆದ್ಯತೆಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸುವುದರಿಂದ ಅಭ್ಯರ್ಥಿಗೆ ಉತ್ತಮವಾದ ಸೀಟು ದೊರೆಯುವ ಸಾಧ್ಯತೆಗಳಿರುತ್ತದೆ. ಅಂದರೆ ಗಣಕ ಯಂತ್ರವು ಆದ್ಯತೆಗಳ ಹುಡುಕುವಿಕೆಯನ್ನು ಒಂದರಿಂದ ಶುರುಮಾಡುತ್ತದೆ.
8. ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸಿದ ಆದ್ಯತೆಗಳ ಮೇರೆಗೆ ಸೀಟನ್ನು ಹಂಚಿಕೆ ಮಾಡಿರುವುದರಿಂದ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಮೇಲೆ ತಿರಸ್ಕರಿಸುವಂತಿಲ್ಲ ಮತ್ತು ನಿರ್ಲಕ್ಷತೆಯನ್ನು ತೋರುವಂತಿಲ್ಲ.
9. ಈ ಮೊದಲೇ ಹೇಳಿದಂತೆ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ನಂತರದ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಹಂಚಿಕೆಯಾಗುವುದರಿಂದ ಯಾವುದೇ ಕಾರಣಕ್ಕೂ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಕಾಲೇಜಿನಲ್ಲಿ **ಮುಂದುವರಿಯಲು ಸಾಧ್ಯವಾಗುವುದಿಲ್ಲ** ಅಂತಹ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿನಲ್ಲಿ ಪ್ರವೇಶವನ್ನು ಪಡೆಯುಬೇಕು.
10. ಅಭ್ಯರ್ಥಿಗಳು ದಯವಿಟ್ಟು ಗಮನಿಸಿ, ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾಗುವುದರಿಂದ ಮೊದಲ ಸುತ್ತಿನಲ್ಲಿ ಹಂಚಿಕೆಯಾಗಿದ್ದ ಸೀಟನ್ನು ಹಿಂಪಡೆಯಲಾಗುವುದಿಲ್ಲ.
11. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆ ಇಲ್ಲದಿದ್ದರೂ ಸಹ ಅಭ್ಯರ್ಥಿಗಳು ಆದ್ಯತೆಗಳನ್ನು ಬದಲಾಯಿಸಬಹುದು ಯಾಕೆಂದರೆ ಸೀಟು ಹಂಚಿಕೆಯ ಕಾರ್ಯದಲ್ಲಿ ಉದ್ಭವಿಸುವ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು.

    **ಗಮನಿಸಿ:** ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

**ಸಹಿ/-**
**ಕಾರ್ಯನಿರ್ವಾಹಕ ನಿರ್ದೇಶಕರು**
**ದಿನಾಂಕ: 06-09-2019**